ಕೊಳ್ಳೆಗಾಲ ತಾಲ್ಲೂಕು ಕೂಡೂರು ಗ್ರಾಮದಲ್ಲಿ ಪ್ರೌಢ ಶಾಲೆ.

2753 (3247) ಶ್ರೀ ರಾಜುಗೌಡ.ಜಿ. (ಹನ್ನೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಳ್ಳೆಗಾಲ ತಾಲ್ಲೂಕು ಕೂಡೂರು ಗ್ರಾಮದಲ್ಲಿ ಪ್ರೌಢಶಾಲೆ ಎಂದು ಪ್ರಾರಂಭವಾಗಿದೆ?

2) ಯಾವ ಯಾವ ವಿಷಯಗಳನ್ನು ಬೋಧಿಸಲಾಗುತ್ತಿದೆ?

3) ಯಾವ ಯಾವ ವಿಷಯಗಳಿಗೆ ಎಂದಿನಿಂದ ಉಪಾಧ್ಯಾಯರುಗಳು ಇಲ್ಲ?

4) ಈ ಹುದ್ದೆಗಳು ನಿರಂತರವಾಗಿ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

5) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣಸಚಿವರು) :

1) 1984

2) ಕನ್ನಡ, ಇಂಗ್ಲೀಷ್, ಹಿಂದಿ, ಗಣಿತ, ಸಾಮಾನ್ಯ ವಿಜ್ಞಾನ.

3) 1) ಪಿ.ಸಿ.ಎಂ. ಸಹಶಿಕ್ಷಕ - ಕಳೆದ 3 ವರ್ಷಗಳಿಂದ ಖಾಲಿ ಇದೆ.

2) ವೃತ್ತಿ ಶಿಕ್ಷಕರು (ತೋಟಗಾರಿಕೆ) - ಖಾಲಿ ಇದೆ.

3) ವೃತ್ತಿ ಶಿಕ್ಷಕರು (ಮರಗೆಲಸ) -ಖಾಲಿ ಇದೆ.

4) ಹಿಂದಿ ಶಿಕ್ಷಕರು(ಅರೆಕಾಲಿಕ) -ಖಾಲಿ ಇದೆ.

4) ಬಂದಿದೆ.

5) ವರ್ಗಾವಣೆ, ನೇಮಕಾತಿ ಅಥವಾ ಬಡ್ತಿ ಮೇರೆಗೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಪದವಿ-ಪೂರ್ವ ಪ್ರವೇಶವನ್ನು ಕಡ್ಡಾಯವಾಗಿ ಕಡಿಮೆ ಅಂಕ ಪಡೆದವರಿಗೆ ನೀಡುವುದು

2754 (3286) ಶ್ರೀ ರಾಮಲಿಂಗಾರೆಡ್ಡಿ(ಜಯನಗರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದಲ್ಲಿರುವ ಖಾಸಗಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು?

2) ಈ ಖಾಸಗಿ ಕಾಲೇಜುಗಳಲ್ಲಿ ಪದವಿ ಪೂರ್ವ ವಿಜ್ಞಾನ, ಕಾಮರ್ಸ್ ಹಾಗೂ ಇತ್ಯಾದಿ ವಿಷಯಗಳಿಗೆ ಕಡಿಮೆ ಅಂಕವನ್ನು ಪಡೆದವರಿಗೆ ಪ್ರವೇಶವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ಶೇಕಡ 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೂ ಸಹ ಇಂತಿಷ್ಟು ಸೀಟುಗಳನ್ನು ಕಡ್ಡಾಯವಾಗಿ ಈ ವಿಷಯಗಳಲ್ಲಿ ನೀಡಬೇಕೆಂದು ಸರ್ಕಾರವು ಆದೇಶಿಸುತ್ತದೆಯೇ?